**ಪಿಡಬ್ಲೂ.1: ಬಾಲಚಂದ್ರ ರೆಡ್ಡಿ.,**

**ದಿನಾಂಕಃ 24.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**4.** ಈ ಹಿಂದೆ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ತಿಳಿಸಿದ್ದು ಆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಅವುಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ, ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಖುದ್ದಾಗಿ ನಾನು 10 ಲಕ್ಷ ರೂ.ಗಳನ್ನು ನಗದಾಗಿ ನೀಡಿದ್ದೆನು. ಕಟ್ಟಡ ಸಾಮಾಗ್ರಿಗಳನ್ನು ಸರಬರಾಜು ಮಾಡಿರುವ ಬಗ್ಗೆ ಆರೋಪಿಯ ಜೊತೆ ಕರಾರು ಮಾಡಿಕೊಂಡಿದ್ದೀರಾ ಎಂದರೆ ಆರೋಪಿಯ ಜೊತೆ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಕಟ್ಟಡ ಸಾಮಾಗ್ರಿಗಳನ್ನು ಆರೋಪಿಗೆ ಸರಬರಾಜು ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಚೆಕ್ಕನ್ನು ಹೊರತುಪಡಿಸಿ ಬೇರೆ ದಾಖಲೆಗಳಿಗೆ ಆರೋಪಿಯ ಸಹಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯ ಸಹಿ ಪಡೆದುಕೊಂಡಿರುವುದಿಲ್ಲ, ಅವರ ಗಂಡನ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಮಧು ಗೌಡ, ವಿರೇಶ್ ಹಾಗೂ ನಮ್ಮ ಅಣ್ಣ ಚಂಗೇಗೌಡ ರವರ ಸಮಕ್ಷಮ ಆರೋಪಿ ನನಗೆ ಚೆಕ್ಕು ನೀಡಿರುತ್ತಾರೆ.

**5.** ನೀವು ಆರೋಪಿಗೆ ಖುದ್ದಾಗಿ ಸರಕುಗಳನ್ನು ಸರಬರಾಜು ಮಾಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯ ಜಮೀನಿನಲ್ಲಿಯೇ ಸರಕುಗಳನ್ನು ಹಾಕಿದ್ದೆವು ಎಂದು ನುಡಿಯುತ್ತಾರೆ. ಆರೋಪಿಗೆ ಸಂಬಂಧಿಸಿದ ಜಮೀನಿನಲ್ಲಿಯೇ ಸರಕುಗಳನ್ನು ಹಾಕಿದ್ದ ಬಗ್ಗೆ ದಾಖಲೆಗಳಿವೆಯೇ ಎಂದರೆ ಸಾಕ್ಷಿಯು ಆರೋಪಿಯು ಕಟ್ಟಡದ ಬಳಿಯೇ ಸರಕುಗಳನ್ನು ಹಾಕಿದ್ದೆವು ಎಂದು ನುಡಿಯುತ್ತಾರೆ. ಆರೋಪಿಗೆ ಸಂಬಂಧಿಸಿದ ಜಮೀನಿನಲ್ಲಿಯೇ ಸರಕುಗಳನ್ನು ಹಾಕಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಆರೋಪಿಯೇ ನಮ್ಮ ತಂದೆಯ

ಜಮೀನು ಎಂದು ತೋರಿಸಿದ ಕಾರಣ ಆ ಜಮೀನಿನಲ್ಲಿ ಹಾಕಿದೆವು ಎಂದು ನುಡಿಯುತ್ತಾರೆ. ಆರೋಪಿಗೆ ಸಂಬಂಧಿಸಿದ ಜಮೀನು ಎಂದು ತೋರಿಸಲು ದಾಖಲೆಗಳಿರುವುದಿಲ್ಲ, ಆದರೆ ಆರೋಪಿಯ ನನ್ನ ತಂದೆಯ ಜಮೀನು ಎಂದು ತೋರಿಸಿದ್ದ ಕಾರಣ ಸರಕುಗಳನ್ನು ಹಾಕಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಇನ್ವಾಯ್ಸ್ ಗೆ ಸಹಿ ಮಾಡಿರುವ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯು ಇನ್ವಾಯ್ಸ್ ಗೆ ಸಹಿ ಮಾಡಿರುವುದಿಲ್ಲ, ಆಕೆಯ ಗಂಡ ಹಾಗೂ ಚಾನೆಲ್ ರವರು ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಮೇಲ್ಕಂಡ ಎಲ್ಲಾ ವಿಷಯಗಳನ್ನು ನನ್ನ ಲೀಗಲ್ ನೋಟೀಸಿನಲ್ಲಿ ತಿಳಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಸರಕುಗಳನ್ನು ಸರಬರಾಜು ಮಾಡಿರುವ ಬಗ್ಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

**6.** ದಿ.16.03.2021 ರಂದು ಆರೋಪಿಯು ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿ. ದಿ.12.09.2020 ರಂದು ಕೆ.ಆರ್. ಇನ್ ಹೋಟೆಲ್‌ಗೆ ಆರೋಪಿ ಬಂದಿರಲಿಲ್ಲ, ನಾನು, ಮಧುಗೌಡ, ಚಂಗೇಗೌಡ, ಸುಬ್ರಮಣಿ, ವಿಜಯ್‌ಕುಮಾರ್ ಮತ್ತು ವಿರೇಶ್ ಬಂದಿದ್ದರು. ಆ ಸಮಯದಲ್ಲಿ ಎಲ್ಲರ ಸಮಕ್ಷಮ ಕರಾರು ಮಾಡಿಕೊಂಡಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಆ ಕರಾರಿಗೆ ಆರೋಪಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ವಿವಾದಿತ ಚೆಕ್ಕು ನಂಬರ್ 000466, 10 ಲಕ್ಷ ರೂ. ನಗದು ನೀಡಿರುವುದಕ್ಕೆ ಸಂಬಂಧಿಸಿರುತ್ತದೆಯೇ ಹೊರತು ಬೇರೆ ಯಾವುದೇ ವ್ಯವಹಾರಕ್ಕೂ ಸಂಬಂಧಿಸಿರುವುದಿಲ್ಲ. ಕೆ.ಆರ್. ಪುರಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದಾಗ ಆ ದೂರಿನಲ್ಲೂ ಸಹ ವಿವಾದಿತ ಚೆಕ್ಕು ಸಂಖ್ಯೆ 000466 ಎಂದು ನಮೂದಿಸಿರುತ್ತೇನೆ. 2020 ರಲ್ಲಿ ಆರೋಪಿ ಖಾಲಿ ಚೆಕ್ಕು ನೀಡಿದ್ದು ಎಂದು ಸಾಕ್ಷ್ಯ ನುಡಿದು ನಂತರ ಆರೋಪಿಯೇ ಚೆಕ್ಕನ್ನು ಬರೆದು ನೀಡಿದ್ದರು ಎಂದು ನುಡಿಯುತ್ತಾರೆ. ದಿ.22.11.2022 ರಂದು ಆರೋಪಿಗೆ 10 ಲಕ್ಷ ರೂ. ನಗದನ್ನು ನಮ್ಮ

ಊರಿನಲ್ಲಿಯೇ ನೀಡಿದ್ದೆನು. ದಿ.21.11.2022 ರಂದು ಆರೋಪಿ ನನ್ನನ್ನು ಭೇಟಿಯಾಗಿ ಹಣ ಕೇಳಿದರು. ದಿ.16.03.2021 ರಂದು ನೀವು ಕೆ.ಆರ್. ಪುರಂ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನಲ್ಲಿ ಚೆಕ್ ನಂಬರ್ 000466 ಹಾಗೂ 000461 ಗಳಲ್ಲಿ ದಿನಾಂಕವನ್ನು ನಮೂದಿಸದೆ ನೀಡಿದ್ದರು ಎಂದು ನಮೂದಿಸಿರುತ್ತೀರಿ ಎಂದರೆ ಸರಿ. ನಿಮ್ಮ ನೋಟೀಸಿನಲ್ಲಿ ದಿನಾಂಕವನ್ನು ನಮೂದಿಸಿದ ಚೆಕ್ಕನ್ನು ನೀಡಿದ್ದರು ಎಂದು ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ನೋಟೀಸು ಆಂಗ್ಲ ಭಾಷೆಯಲ್ಲಿರುವ ಕಾರಣ ನಾನು ಅದನ್ನು ಓದಿ ತಿಳಿದುಕೊಂಡಿರುವುದಿಲ್ಲ. ಹಾಗೆಯೇ ವಕೀಲರಿಂದ ಓದಿಸಿ ತಿಳಿದುಕೊಂಡಿರುವುದಿಲ್ಲ.

**7.** ನೀವು ಚೆಕ್ಕನ್ನು ಹಾಜರುಪಡಿಸಿದಾಗ ಅಕೌಂಟ್ ಕ್ಲೋಸ್ಡ್ ಎಂದು ಹಿಂಬರಹ ಬಂದಿರುತ್ತದೆ ಎಂದರೆ ಸರಿ. ನಾನು ಕೆ.ಆರ್. ಪುರಂ ಪೊಲೀಸ್ ಠಾಣೆಗೆ ದೂರು ನೀಡಿದ ದಿನಾಂಕದಿಂದ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ ದಿನಾಂಕಕ್ಕೆ ಸುಮಾರು ಮೂರು ವರ್ಷಗಳ ಅಂತರವಿದೆ. ಆರೋಪಿ ಚಾನೆಲ್‌ನ ಪಾಲುದಾರರಾಗಿರುತ್ತಾರೆಯೇ ಎಂದರೆ ಸಾಕ್ಷಿಯು ನಿರ್ದೇಶಕರಾಗಿರುತ್ತಾರೆ ಎಂದು ನುಡಿಯುತ್ತಾರೆ. ನೋಟೀಸಿನಲ್ಲಿ ಸರಕುಗಳನ್ನು ಸರಬರಾಜು ಮಾಡಿರುವ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಅದನ್ನು ನಮ್ಮ ವಕೀಲರು ನೀಡಿರುತ್ತಾರೆ ಅದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನೋಟೀಸಿನಲ್ಲಿ ಬರೆದಿರುವ ವಿಷಯಗಳನ್ನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಸಾಮಾಗ್ರಿಗಳನ್ನು ಸರಬರಾಜು ಮಾಡಿರುವ ಬಗ್ಗೆ ನೋಟೀಸಿನಲ್ಲಿ ತಿಳಿಸಿದ್ದಾರೆಯೇ ಎಂದರೆ ನೋಟೀಸಿನ ಅಂಶಗಳನ್ನು ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ವಿವಾದಿತ ಚೆಕ್ಕುಗಳನ್ನು ಯಾರು ಕೊಟ್ಟರು ಎಂದರೆ ಮಧುಗೌಡ, ವಿರೇಶ್, ಚಂಗೇಗೌಡ, ಹಾಗೂ ನನ್ನ ಸಮಕ್ಷಮ ಆರೋಪಿ ನನಗೆ ಚೆಕ್ಕುಗಳನ್ನು ನೀಡಿದ್ದರು. ಐಸಿಐಸಿಐ ಬ್ಯಾಂಕಿನ 6-7 ಚೆಕ್ಕುಗಳನ್ನು, ಕೋ-ಆಪರೇಟಿವ್ ಸೊಸೈಟಿಯ ಮೂರು ಚೆಕ್ಕುಗಳನ್ನು ನೀಡಿದ್ದು ಅವುಗಳಲ್ಲಿ ಎರಡು ಚೆಕ್ಕುಗಳನ್ನು ಆರೋಪಿ ಹಿಂಪಡೆದುಕೊಂಡು

**ಪಿಡಬ್ಲೂ.1: ಬಾಲಚಂದ್ರ ರೆಡ್ಡಿ.,**

ಐಸಿಐಸಿಐ ಬ್ಯಾಂಕಿನ 6-7 ಚೆಕ್ಕುಗಳನ್ನು ನೀಡಿದರು ಮತ್ತು ಐಡಿಎಫ್ಸಿ ಬ್ಯಾಂಕಿನ 5-6 ಚೆಕ್ಕುಗಳನ್ನು ನೀಡಿದ್ದರು. ಸದರಿ ವಿಷಯವನ್ನು ನೋಟಸೀಸಿಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ನಾನು ನಮ್ಮ ವಕೀಲರಿಗೆ ತಿಳಿಸಿದ್ದೆನು ಎಂದು ನುಡಿಯುತ್ತಾರೆ. ಪಿರ್ಯಾದಿನಲ್ಲಿ ಹಾಗೂ ಸ್ವ-ಇಚ್ಛೆ ಹೇಳಿಕೆಯಲ್ಲಿ ಬರೆದಿರುವ ಅಂಶಗಳು ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿಯು ನಾನು ಓದಿಸಿ ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ, ಆದರೆ ಆಂಗ್ಲ ಭಾಷೆಯಲ್ಲಿ ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದನ್ನು ದಾಖಲಿಸುವ ವೇಳೆಯಲ್ಲಿ ಪಿ.ಆರ್.ಎಸ್ ಲೇನ್ ನಲ್ಲಿ ಜನವರಿ 2020 ರಿಂದ ಜುಲೈ 2023 ರವರೆಗೆ ವಿಶ್ವನಾಥ್ ಆಚಾರ್ಯ ರವರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು. ಬಾಡಿಗೆ ಕರಾರು ಮಾಡಿಕೊಂಡಿದ್ದೆವು, ಆ ದಾಖಲೆಯನ್ನು ಹಾಜರುಪಡಿಸುತ್ತೇನೆ. ನೀವು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದನ್ನು ದಾಖಲಿಸುವ ಉದ್ದೇಶಕ್ಕಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.